**ಕನ್ನಡದ ವಿಶಿಷ್ಟ ಕತೆಗಾರ, ಅನನ್ಯ ಅನುವಾದಕ ಕೆ. ವೀರಭದ್ರ ಇತ್ತೀಚೆಗೆ (ಸೆಪ್ಟೆಂಬರ್ 6, 2017) ನಿಧನರಾದರು. ತೆಲುಗು, ಹಿಂದಿ ಭಾಷೆಗಳಿಂದ ಕತೆ, ಕಾದಂಬರಿಗಳನ್ನು ಭಾಷಾಂತರಿಸುವ ಮೂಲಕ ಬೇರೆ ಭಾಷೆಯ ಸೊಗಡನ್ನು ಕನ್ನಡಕ್ಕೆ ಪರಿಚಯಿಸಿದವರಲ್ಲಿ ಪ್ರಮುಖರು. ಅವರ ಬರಹದ ಬದುಕಿನ ಕಿರು ಪರಿಚಯ ಇಲ್ಲಿದೆ...**

ಪತ್ರಕರ್ತೆ ಗೌರಿ ಲಂಕೇಶ ಅವರ ದುರ್ಮರಣದ ವಾರ್ತೆಯನ್ನು ದೂರದರ್ಶನದಲ್ಲಿ ನೋಡಿ, ಬೆಚ್ಚಿ, ತಡರಾತ್ರಿಯ ತನಕ ಹಾಸಿಗೆಯಲ್ಲಿ ಹೊರಳಾಡಿ ಕಣ್ಮುಚ್ಚಿ ಕಣ್ಣು ಬಿಡುವ ಹೊತ್ತಿಗೆ ಮೂಲಕ ಸುದ್ದಿ ಮುಟ್ಟಿತು– ಅದು ಖ್ಯಾತ ಕತೆಗಾರ ಕೆ. ವೀರಭದ್ರ ಅವರ ನಿಧನದ ಸುದ್ದಿಯಾಗಿತ್ತು. ಗೌರಿ ಲಂಕೇಶ್ ಅವರ ಸಾವಿನ ಸುದ್ದಿಯೇ ಪತ್ರಿಕೆಗಳ ಪುಟಗಳನ್ನು ಹೆಚ್ಚು ಆವರಿಸಿಕೊಂಡಿದ್ದರಿಂದ ಅದಕ್ಕೆ ಅವರ ಹತ್ಯೆಯ ರೀತಿಯೂ ಕಾರಣವಾಗಿದ್ದ ಕಾರಣಕ್ಕೆ ಲೇಖಕರೊಬ್ಬರ ನಿಧನದ ಸುದ್ದಿ 'ನಿಧನ' ಕಾಲಂನಲ್ಲಿ ಅವರೊಬ್ಬ 'ನಿವೃತ್ತ ಪ್ರಾಧ್ಯಾಪಕ' ಎನ್ನುವುದಷ್ಟಕ್ಕೇ ಸೀಮಿತವಾಗಿತ್ತು.

ಕನ್ನಡ ಸಣ್ಣ ಕತೆಯನ್ನು ಬೆಳೆಸಿದ ಮಾಸ್ತಿ, ಆನಂದ, ಕುವೆಂಪು, ಚದುರಂಗ, ಕಟ್ಟೀಮನಿ, ಲಂಕೇಶ್, ಅನಂತಮೂರ್ತಿ, ಯಶವಂತ ಚಿತ್ತಾಲ, ರಾಜಶೇಖರ ನೀರಮಾನ್ವಿ, ನಾಗವಾರ, ಮಹಾದೇವರಷ್ಟೇ ಮುಖ್ಯರಾದವರು ವೀರಭದ್ರ. ಅರವತ್ತರ ದಶಕದಲ್ಲಿ ನವ್ಯರು ಕನ್ನಡ ಸಣ್ಣ ಕತೆಯ ಲೋಕವನ್ನು ವಿಸ್ತರಿಸುತ್ತಿದ್ದಾಗ ವೀರಭದ್ರರ ಕತೆಗಳು ಕನ್ನಡ ಕಥನ ರೀತಿಯಲ್ಲಿ ಇನ್ನೂ ವಿಶಿಷ್ಟವಾದ ಕಥನ ವಿಧಾನವಿದೆ ಎಂಬುದನ್ನು ತೋರಿಸಿಕೊಟ್ಟವು. ಅವರ 'ಅನಾಥ ಪಕ್ಷಿಯ ಕೃಷ್ಣಪಕ್ಷ'ವಂತೂ ಗ್ರಾಮೀಣ ಭಾರತದ ಹೃದಯಗಳನ್ನು ಸಂಪೂರ್ಣ ಸೂರೆಗೊಂಡಿತು. ಆಗಲೂ ಈಗಲೂ, ಕತೆಗಾರರ ಕತೆಯಾಗಿ, ಹೃದಯವಂತ ಓದುಗರಿಗೆ ದಿವ್ಯ ಅಚ್ಚರಿಯಾಗಿ ಈ ಕತೆ ನಿಂತಿದೆ.

'ಬಹುಪಾಲು ಲೇಖಕರು ನಿರ್ಲಕ್ಷಿಸಿರುವ ಜನಸಾಮಾನ್ಯರಲ್ಲಿ ಕನಿಷ್ಠರಾದವರ ಬದುಕನ್ನು ತಮ್ಮ ಕ್ಷ–ಕಿರಣಗಳನ್ನೊಳಗೊಂಡ ಕಣ್ಣುಗಳ ಮೂಲಕ ಚಿತ್ರಿಸಿರುವ ವೀರಭದ್ರ, ಬದುಕಿನಲ್ಲಿ ಬಹು ನೋವನ್ನುಂಡು ಅಮೃತವನ್ನು ಲೋಕಕ್ಕೆ ನೀಡಿದವರು. ಇವರನ್ನು ಕಂಡರೆ ವಿಧಿ ತನ್ನ ನಾಗರ ಹೆಡೆಯನ್ನು ಇಳಿಸುತ್ತದೆ. ವೀರಭದ್ರರ ಲೇಖನಿ ಕನ್ನಡ ಭಾಷೆಗೆ ಒಂದು ಹೊಸ ರೂಪವನ್ನೇ ನೀಡಿದೆ. ವೀರಭದ್ರತನ ಕನ್ನಡ ಕಥನಕಲೆ ಇರುವ ತನಕವೂ ಮೇಲ್ಪಂಕ್ತಿಯಲ್ಲಿ ಮೆರೆಯುತ್ತಿರುತ್ತದೆ' ಎಂದು ಅವರ ಸಮಗ್ರ ಕಥಾ ಸಂಕಲನ